**‘See the lady, but don’t touch her body. If you touch her body some body will make a C.D.!**

ಮತ್ತೊಂದು ಅದ್ಭುತ! ಜಗತ್ತನ್ನೇ ಜಾಲಿಯಾಗಿ ನೋಡಿದ ಖಾಲಿ ಸ್ವಾಮಿ ಕೈಲಾಸಾನಂದ ಇದ್ದರು. ಅವರು ತಮ್ಮ ದೇಶಕ್ಕೆ ಹೋಗಲು ಅದೇ ಏರ್‌ಪೋರ್ಟ್‌ಗೆ ಬಂದಿದ್ದರು. ಹಳೆಯ ಪರಿಚಯದ ಮೇಲೆ ಅವರ ಬಳಿಗೆ ಹೋಗಿ ಕಾಲಿಗೆ ಬಿದ್ದರು. ‘ತಲೆಗಿಂತ ಕಾಲು ಮುಖ್ಯ. ಅದಕ್ಕೇ ಜನ ಕಾಲಿಗೆ ಮಾತ್ರ ನಮಸ್ಕರಿಸುತ್ತಾರೆ’ ಅಂತ ಒಂದು ಉಪನ್ಯಾಸದಲ್ಲಿ ಸ್ವಾಮೀಜಿ ಹೇಳಿದ ನೆನಪು.

‘ಹ್ಯಾಗೆ ನಡೀತಿದೆ ಜೀವನ’ ಎಂದು ಸ್ವಾಮೀಜಿ ತಮ್ಮದೇ ಆದ ಶೈಲಿಯಲ್ಲಿ ನಕ್ಕರು.

‘ನಿಮ್ಮ ದೇಶದಲ್ಲಿ ಕೆಲವು ಅನೇಕ ಸುಧಾರಿತ ಕಾನೂನುಗಳು ಇವೆಯಂತೆ ಸ್ವಾಮೀಜಿ, ಆ ಬಗ್ಗೆ ತಿಳಿಸಿಕೊಡಿ’ ಎಂದು ವಿಶ್ವ ಕೇಳಿದ.

‘ಏನು ನಿನ್ನ ಅನುಮಾನ?’ ಸ್ವಾಮೀಜಿ ಪ್ರಶ್ನೆ ಮಾಡಿದರು.

‘ಒಬ್ಬ ವ್ಯಕ್ತಿ ಎಷ್ಟು ಸಲ ತಪ್ಪು ಮಾಡಲು ಅವಕಾಶ ಇದೆ?’ ಎಂದ ವಿಶ್ವ.

ಸ್ವಾಮೀಜಿಗಳು ಏರ್‌ಪೋರ್ಟ್‌ನಲ್ಲೇ ತಮ್ಮ ಉಪನ್ಯಾಸ ಶುರು ಮಾಡಿದರು.

**‘You see, Error is Human and Forgive is divine. For example,** ಸಿಗ್ನಲ್ ಜಂಪು ಆದಾಗ ವಾರ್ನಿಂಗ್ ಕೊಡ್ತಾರೆ. ಪ್ರಾಬ್ಲಮ್ಮು ಸಿಗ್ನಲ್‌ದು, ಗಾಡಿಯವನದಲ್ಲ. ಮೂರು ಸಲ ಸಿಗ್ನಲ್ ಜಂಪ್ ಆದ್ರೆ ಫೈನ್ ಹಾಕ್ತಾರೆ. ಫೋರ್ಥ್ ಟೈಂ ರಿಪೀಟಾದರೆ ಲೈಸೆನ್ಸ್ ಕ್ಯಾನ್ಸಲ್ ಆಗುತ್ತೆ. **Similarity,** ಮೂರು ಸಲ ಎಲ್ಲಕ್ಕೂ ಕ್ಷಮೆ ಬೇಕು. **Even for C.D.’**

ವಿಶಾಲುಗೆ ಸಂತೋಷವಾಯಿತು.

‘ಹೌದು ಸ್ವಾಮೀಜಿಗಳೇ, ನೀರಿಗೆ ಬಿದ್ದವರನ್ನ ಗಂಗಾಮಾತೆ ಕೂಡ ಮೂರು ಸಲ ಮುಳುಗಿಸಿ ತೇಲಿಸ್ತಾಳೆ.’

**‘Ladies are always correct.** ಹಿ ಹ್ಹಿ ಹ್ಹೀ’ ಎಂದು ಸ್ವಾಮೀಜಿ ನಕ್ಕರು.

‘ಸ್ವಾಮೀಜಿಗಳೇ, ಸಿ.ಡಿ. ಆಚೆ ಬಂದ್ರೆ ದೊಡ್ಡ ಹಗರಣ ಆಗುತ್ತೆ ಯಾಕೆ?’

‘ಮ್ಯೂಸಿಕ್ ಸಿ.ಡಿ.ನಾ?’

ಸ್ವಾಮೀಜಿ ಅಮಾಯಕರಂತೆ ಕೇಳಿದರು.

‘ಅಲ್ಲ, ಡಿಂಗ್‌ಡಾಂಗ್ ಸಿ.ಡಿ.’

ವಿಶಾಲು ವಿಶ್ವನನ್ನು ಚಿವುಟಿ, ಸ್ವಾಮಿಗಳ ಎದುರು ಪೋಲಿಯಾಗಿ ಮಾತಾಡಬಾರದು ಎಂದು ಬೈದಳು.

‘ಅವರು ಎಕ್ಸ್‌ಪರ್ಟಮ್ಮಾ, ಇದರಲ್ಲಿ ಡಾಕ್ಟರೇಟ್ ತಗೊಂಡಿದ್ದಾರೆ. ಮೊಟ್ಟ ಮೊದಲು ಸೆನ್ಸೇಷನಲ್ ಸಿ.ಡಿ. ಬಿಡುಗಡೆ ಆಗಿದ್ದು ಅವರದೇ.’

ಕೈಲಾಸಾನಂದ ನಗುತ್ತಾ,

‘ಯಸ್, ಸೀಯಿಂಗ್ ಈಸ್ ಬಿಲೀವಿಂಗ್ ನನ್ನ ಸಿ.ಡಿ. ಎಲ್ಲಾ ದೇಶಗಳಲ್ಲೂ ಪಾಪ್ಯುಲರ್ ಆಗಿದೆ. ಇದರ ಬಗ್ಗೆ ನನ್ನ ಸೇಯಿಂಗ್ ಏನು ಗೊತ್ತಾ?’

‘ಹೇಳಿ.’

**‘See the lady, but don’t touch her body. If you touch her body some body will make a C.D.’** ಎಂದು ಏರೋಡ್ರೊಂ ನಡುಗುವಂತೆ ನಕ್ಕರು.

‘ಹೌದು ಸ್ವಾಮೀಜಿಗಳೇ, ಮನರಂಜನಾ ಕಾರ್ಯಕ್ರಮಗಳಲ್ಲಿ ಈ ಡೈಲಾಗ್ಸ್ ನಾನು ಅನೇಕ ಸಲ ಕೇಳಿದ್ದೀನಿ’ ಎಂದು ವಿಶ್ವ ಅಭಿಮಾನದಿಂದ ಹೇಳಿದ.

‘ಇನ್‌ಫ್ಯಾಕ್ಟ್, ಡೊನಾಲ್ಡ್ ಟ್ರಂಪ್‌ಗೆ ನನ್ನ ಸೇಯಿಂಗ್ ಇಷ್ಟ

